ಆ) ಸದರಿ ಯೋಜನೆಯು ಈಗ ಯಾವ ಹಂತದಲ್ಲಿದೆ :

ಇ) ಸಿಂಧಗಿ ತಾಲ್ಲೂಕಿನ ಎಷ್ಟು ಹೆಕ್ಟೇರ್ ಪ್ರದೇಶವನ್ನು ಈ ಯೋಜನೆಯ ವ್ಯಾಪ್ತಿಗೊಳಪಡಿಸಲಾಗಿದೆ (ಗ್ರಾಮವಾರು ವಿವರ ನೀಡುವುದು) :

ಈ) ಸದರಿ ಯೋಜನೆಯ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರೈಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ) ಚಿಮ್ಮಲಗಿ ಏತ ನೀರಾವರಿ ಯೋಜನೆಯು ಸ್ಕೀಂ-'ಬಿ' ಅಡಿಯಲ್ಲಿ ಪ್ರಸ್ತಾವನೆ ಇದ್ದು, ಸಧ್ಯ ಈ ಯೋಜನೆಯ ಕಾಮಗಾರಿಗಳಿಗೆ ಯಾವುದೇ ಅನುದಾನ ಮೀಸಲಾಗಿಟ್ಟಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಮೇಲಿನಂತೆ.

901(1478) ಶ್ರೀ ಅಶೋಕ ಗುರಪ್ಪ ಶಾಬಾದಿ(ಸಿಂಧಗಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇಂಡಿ ಏತ ನೀರಾವರಿ ಯೋಜನೆ ಕಾಮಗಾರಿಯನ್ನು ಪೂರೈಸಲು ಸರ್ಕಾರವು ನಿಗಧಿಗೊಳಿಸಿರುವ ಕಾಲಮಿತಿಯೇನು :

ಆ) ಈ ಕಾಮಗಾರಿಯು ಅತ್ಯಂತ ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಇ) ಸದರಿ ಯೋಜನೆಯ ವ್ಯಾಪ್ತಿಗೆ ಒಳಪಟ್ಟ ರೈತರಿಗೆ ನೀರು ಒದಗಿಸಲು ಯೋಜನೆ ರೂಪಿಸುವುದು ಯಾವಾಗ ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಸದರಿ ಯೋಜನೆಯನ್ನು ಮಾರ್ಚ್ 2006 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಆ) ಯೋಜನೆಯ ಜಾಕ್‌ವೆಲ್, ಮುಖ್ಯ ಕಾಲುವೆ, ವಿತರಣಾ ಕಾಲುವೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ವಿತರಣಾ ಕಾಲುವೆ ಜಾಲದ ಉಳಿದ ಕಾಮಗಾರಿಗಳಿಗಾಗಿ ಅಂದಾಜು ಪತ್ರಿಕೆಗಳು ತಯಾರಿಸಲಾಗಿದ್ದು, ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸದರಿ ಯೋಜನೆ ವ್ಯಾಪ್ತಿಗೆ ಬರುವ 41,900 ಹೆ. ಪ್ರದೇಶಕ್ಕೆ ಮಾರ್ಚ್ 2006 ರೊಳಗೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.

903(172) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಸುತ್ತಮುತ್ತಲಿನ ಏಳು ನಗರಸಭೆಯ ವ್ಯಾಪ್ತಿಯ ಕಾವೇರಿ ನೀರಿನ ಸರಬರಾಜು ಕಾಮಗಾರಿಗಳ ಸಂದರ್ಭದಲ್ಲಿ ಟೆಂಡರ್ ಕರೆದಿರುವುದು ನಿಜವೆ .

ಆ) ಹಾಗಿದ್ದಲಿ ಕಾಮಗಾರಿಗಳು ಪ್ರಾರಂಭವಾಗದಿರಲು ಕಾರಣವೇನು ?

ಇ) ಈ ಯೋಜನೆಗೆ ತಗಲುವ ವೆಚ್ಚ ಎಷ್ಟು ?

ಈ) ಯಾವಾಗ ಈ ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗುವುದು ?